LEGISLATIVE ASSEMBLY.

SIXTEENTH DAY.

Saturday, 10th November 1951.

The Legislative Assembly met in the Assembly Hall, Old Public Offices, Bangalore, at Forty Minutes past Eight of the Clock.—

Mr. SPEAKER (The Hon'ble Sri V. Venkatappa) in the Chair.

QUESTIONS AND ANSWERS.

Expenses incurred by Government for the tour of the Rajpramukh.

Q.—175. Sri K. R. SREEKANTESWAR (Bangalore City—General)—

Will the Government be pleased to state:—

(*a*) the expenses incurred by the Government for the tour of the Rajpramukh during July and August of this year;

(*b*) whether any Minister of the Government accompanied the Rajpramukh on his tour;

(*c*) if so, the travelling expenses drawn by them;

(*d*) whether the tour of the Ministers was undertaken on Government business?

A.—The Hon'ble Sri H. C. DASAPPA (Minister for Finance and Industries). [on behalf of the Hon'ble Sri K. CHENGALARAYA REDDY (Chief Minister)].—

(*a*) No expenditure was incurred by the Government for the tour of the Rajpramukh during July and August 1951.

(*b*) and (*c*) Yes.

The following Hon'ble Ministers accompanied the Rajpramukh on his tours during July and August 1951:—

Hon'ble Ministers	*Amount showing the T. A. expenses drawn by them*		
	Rs.	a.	p.
1. The Hon'ble Chief Minister.	566	2	5
2. The Hon'ble Minister for Finance and Industries.	203	0	0*
3. The Hon'ble Minister for Revenue and and Excise.	334	11	0
4. The Hon'ble Home Minister.	273	1	7
5. The Hon'ble Minister for Local Self-Government.	402	5	1

* (Approx.)

(*d*) Yes, on Government business.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—'No expenditure was incurred by the Government for the tour of the Raj-Pramukh' ಎಂದಿದೆ. ಅಂದರೆ ಈ ಟೂರ್‌ಮಾಡುವುದಕ್ಕೆ ಮಂತ್ರಿಗಳಿಗೆ ಏನೂ ಖರ್ಚೇ ಆಗಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಖರ್ಚಾಗದೆ ಟೂರ್ ಆಗುತ್ತದೆಯೇ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಹಾಗಾದರೆ ಸರ್ಕಾರದವರು ಏನು ಖರ್ಚು ಮಾಡಿದ್ದಾರೋ ಅದನ್ನು ಅವರೇ ಕೊಡುತ್ತಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರ ಅಲೋಯನ್ಸಿನಿಂದ ಖರ್ಚುಮಾಡುತ್ತಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇಂಡಿಯಾ ಸರ್ಕಾರದವರು 22 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರಲ್ಲಾ ಅದರಿಂದ ಖರ್ಚಾಗುತ್ತದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ರಾಜಪ್ರಮುಖರಿಗಾಗಿ ಟೂರ್ ಅರೋಯೆನ್ಸ್ ಕೊಟ್ಟಿದೆ. ಅದರಿಂದ ಖರ್ಚುಮಾಡಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ರಾಜಪ್ರಮುಖರ ಜೊತೆಯಲ್ಲಿ ಯಾರ್ಯಾರು ಮಂತ್ರಿಗಳು ಹೋಗಿದ್ದರೋ ಅವರು ಹಾಗೆ ಹೋಗುವುದಕ್ಕೆ ಅವಶ್ಯಕತೆಯೇನಾದರೂ ಇತ್ತೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವಶ್ಯಕತೆಯಿದ್ದುದರಿಂದಲೇ ಹೋಗಿದ್ದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಏನು ಅವಶ್ಯಕತೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಟೂರ್ ಹೊರಟರೆ ನಾನಾ ಇಲಾಖೆಗಳವರಿಗೆ ಕೆಲಸಗಳಿರುತ್ತವೆ. ತತ್ಸಂಬಂಧವಾಗಿ ಮಂತ್ರಿಗಳು ಆಯಾ ಕೆಲಸಗಳಿಗೆ ಗಮನಕೊಡಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಮಂತ್ರಿಗಳು ರಾಜಪ್ರಮುಖರ ಜೊತೆಯಲ್ಲೇ ಹೋಗುವುದರಿಂದ ಅವರು , ಕಾರಿಗೆ ಖರ್ಚುಮಾಡುವುದನ್ನೂ ರಾಜಪ್ರಮುಖರ ಬಿಲ್ಲಿಗೆ ಸೇರಿಸಬಹುದಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಕಾನೂನಿಗೆ ವಿರೋಧ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಯಾವ ಕಾನೂನಿಗೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಮ್ಮ ಅಕೌಂಟ್ ಕೋಡಿಗೆ ರಾಜಪ್ರಮುಖರ ಅರೋಯ ನ್ಸಿಗೆ ಅದನ್ನು ಸೇರಿಸಕೂಡದು.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ರಾಜಪ್ರಮುಖರ ಜೊತೆಯಲ್ಲಿ ಮಂತ್ರಿಗಳು ಟೂರ್ ಹೋದರಲ್ಲಾ, ಅವರು ಎಷ್ಟೆಷ್ಟು ಮೈಲಿ ಟೂರ್ ಮಾಡಿದ್ದಾರೆ.

The Hon'ble Sri H. C. DASAPPA.—I cannot say the mileage. If the Hon'ble Member gives notice of the question, I shall be glad to furnish him the information.

ಶ್ರೀ ಎಂ. ಗೋವಿಂದರೆಡ್ಡಿಯವರು.—ಎಷ್ಟು ಡಿಸ್ಟ್ರಿಕ್ಟ್‌ಗಳಲ್ಲಿ ಸಂಚಾರಮಾಡಬೇಕಾಯಿತೆಂಬುದನ್ನಾದರೂ ಹೇಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದೂ ಗೊತ್ತಿಲ್ಲ. ರಾಜಪ್ರಮುಖರು ಎಲ್ಲೆಲ್ಲಿ ಹೋದರೋ ಅಲ್ಲೆಲ್ಲಾ ಹೋದರು. ಯಾವ ಯಾವ ಡಿಸ್ಟ್ರಿಕ್ಟ್‌ಗಳಿಗೆ ಹೋಗಿದ್ದರೆಂಬುದನ್ನು ತಿಳಿಸುವುದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ರಾಜಪ್ರಮುಖರ ಟೂರ್ ಸಂದರ್ಭದಲ್ಲಿ ಎಲ್ಲಾ ಮಂತ್ರಿಗಳೂ ಇರಬೇಕೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಎಷ್ಟೆಷ್ಟು ಜನ ಇರಬೇಕೆಂದಿದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—It all depends on the functions and the places he visits. ಉದಾಹರಣೆಗೆ, ಜೋಗ್ ಎರೆಕ್ಟ್ರಿಕ್ ಏರ್ಪಾಡುಗಳನ್ನೂ ನೋಡುವುದಕ್ಕೆ ಹೋದರೆ, ಅಥವಾ ಶಿವಸಮುದ್ರಕ್ಕೆ ಹೋದರೆ ಎರೆಕ್ಟ್ರಿಸಿಟಿಗೆ ಸಂಬಂಧಪಟ್ಟ ಮಂತ್ರಿಗಳು ಹೋಗಬೇಕು. ಭದ್ರಾವತಿಗೆ ಕಬ್ಬಿಣದ ಕಾರ್ಖಾನೆಗೆ ಹೋದರೆ ನಾನು ಹೋಗಬೇಕಾಗುತ್ತದೆ. ಎಜುಕೇಷನಲ್ ಕಾನ್ಫರೆನ್ಸ್ ಆದಾಗ ವಿದ್ಯಾ ಮಂತ್ರಿಗಳು ಹೋಗಬೇಕಾಗುತ್ತದೆ. ಹಾಗೆಯೇ ಯಾವುದಾದರೂ ಸ್ಕೀಮುವೆಯನ್ನು ತೆರೆಯುವ ಸಮಾರಂಭವಿದ್ದರೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಹೋಗಬೇಕಾಗುತ್ತದೆಂಬುದು ತಮಗೇ ಗೊತ್ತಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಮೊನ್ನೆ ರಾಜಪ್ರಮುಖರ ಟೂರ್ ಸಂದರ್ಭದಲ್ಲಿ ನಾಲ್ಕೈದು ಜನ ಮಂತ್ರಿಗಳು ಅವರ ಜೊತೆಯಲ್ಲಿ ಟೂರ್‌ಮಾಡಿದ್ದು ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಜುಲೈ ಆಗಸ್ಟ್‌ನಲ್ಲಿ ಮಾತ್ರ ಹೋಗಿದ್ದುದು ಗೊತ್ತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅಷ್ಟು ಜನರೂ ಹೀಗೆ ರಾಜಪ್ರಮುಖರ ಜೊತೆ ಒಟ್ಟಿಗೆ ಹೋಗಿಬಿಟ್ಟರೆ ಸರ್ಕಾರಿ ಕೆಲಸಗಳು ಇಲ್ಲಿ ಸರಿಯಾಗಿ ನಡೆಯುತ್ತವೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸರ್ಕಾರಿ ಕೆಲಸಗಳು ಸುವ್ಯವಸ್ಥಿತವಾಗಿ ನಡೆಯುವುದಕ್ಕೇ ಈ ರೀತಿ ಟೂರ್ ಮಾಡುವುದು.

Sri K. SAMPANGI RAMIAH (Mysore District—General).—Is not the Rajpramukh the Executive Head of the State ?

The Hon'ble Sri H. C. DASAPPA.—Yes.

I. V. C. Roads and Badanaguppe and Ummattur Road *via* Dasanur.

Q.—251. **Sri D. M. SIDDIAH** (Mysore District—General).—

Will the Government by pleased to state :—

(*a*) the amount spent for the improvement of the I. V. C. Roads in the State for 1947 to 1951 (districtwar);

(*b*) how many new I. V. C. Roads are put up in the Mysore District during the period of 1947–1951 ;

(*c*) how many are completed and how many are still under construction ;

(*d*) to what category the road between Badanaguppe and Ummattur *via* Devanur belongs ;

(*e*) when the estimate was sanctioned and when it is likely that the work may be taken up ?